ಹೋದವಳು, ಹೋದ ಮೇಲೆ ಮತ್ತೆ ಅವಳೂ ನಂತರ ಕಾಯಿಲೆ ಬಿದ್ದು ಮಲಗಿ ಸತ್ತುಹೋದಳು. ಅವ್ವನ ಕಾರ್ಯಗಳನ್ನೆಲ್ಲಾ ದೊಡ್ಡಮ್ಮನ ಮಗನೇ ನಿಂತು ನೆರವೇರಿಸಿದ. ನಾನು, ಮಾವ ಇಬ್ಬರೂ ಹೋಗಿ ಅವ್ವನ ಶ್ರಾದ್ಧದ ಕಾರ್ಯಗಳಲ್ಲೆಲ್ಲಾ ಪಾಲ್ಗೊಂಡು ಬಂದೆವು.

ಮಾವ ಈ ನಡುವೆ ತುಂಬಾ ಮೌನವಾಗಿರುತ್ತಿದ್ದರು. ತಮಗೆ ಬೇಸರ ಅಥವಾ ನೆನಪಾದಾಗ ಕುಮಾರವ್ಯಾಸ ಭಾರತವನ್ನು ಜಗುಲಿಯಲ್ಲಿ ಪಠಣ ಮಾಡುತ್ತ ಕೂತುಬಿಡುತ್ತಿದ್ದರು. ನನಗೆ ನಿತ್ಯ ಮನೆಯೊಳಗಿನ ಕೆಲಸವೇ ಆಗುತ್ತಿತ್ತು. ನಾನೇ ಹಸುವಿನ ಹಾಲು ಕರೆಯುತ್ತಿದ್ದೆ. ಹಸುವಿಗೆ ಭೈರಣ್ಣನೇ ಹುಲ್ಲು ತಂದು ಹಾಕುತ್ತಿದ್ದ. ಒಮ್ಮೊಮ್ಮೆ ಅದನ್ನು ನಮ್ಮ ಹೊಲದ ಹತ್ತಿರ ಮೇಯಿಸಿಕೊಂಡು ಬಂದು ಮನೆಯಲ್ಲಿ ಕಟ್ಟುತ್ತಿದ್ದ. ಅವನು ವ್ಯವಸಾಯದಲ್ಲಿ ಒಳ್ಳೆ ಚತುರನಾಗಿದ್ದ. ವರ್ಷ ವರ್ಷ ನಮ್ಮ ಹೊಲಗದ್ದೆಯಲ್ಲಿ ಉತ್ತಮ ರೀತಿಯಲ್ಲಿ ಫಸಲನ್ನು ತೆಗೆದು ನಮಗೆ ಸರಿಯಾಗಿ ಪಾಲು ಕೊಟ್ಟು ತನ್ನ ಹೆಂಡತಿ, ಮೂವರು ಮಕ್ಕಳ ಸಂಸಾರವನ್ನು ಅಚ್ಚುಕಟ್ಟಾಗಿ ನಿರ್ವಹಿಸಿಕೊಂಡು ಹೋಗುತ್ತಿದ್ದ. ಅವನು ನಮ್ಮ ಮಾವನ ಬಗ್ಗೆ, ನನ್ನ ಅಕ್ಕನ ಬಗ್ಗೆ ತುಂಬಾ ಗೌರವ ಇಟ್ಟುಕೊಂಡಿದ್ದ.

ಆಗಾಗ ಮಾವನ ಬಳಿಗೆ ಬರುತ್ತಿದ್ದ, ಸಿದ್ದೇಗೌಡರೂ ಮಾವನನ್ನು ಗೆಲುವಾಗಿ ಇಡಲು ಯತ್ನಿಸುತ್ತಿದ್ದರು. ಮಾವ ತಾನೇ ಹಣಕೊಟ್ಟರೂ ತನ್ನ ಕಷ್ಟಕಾಲಕ್ಕೆ, ಅಕ್ಕನ ಸಾವಿನ ಸಂದರ್ಭದಲ್ಲಿ ಮುಂದಾಗಿ ನಿಂತು ಎಲ್ಲಾ ಕಾರ್ಯಗಳನ್ನು ನಿರ್ವಹಿಸಿದ ಸಿದ್ದೇಗೌಡರಿಗೆ ಹೇಗೆ ಕೃತಜ್ಞತೆ ಸೂಚಿಸುವುದು ಎಂದೆಲ್ಲಾ ಮಾತನಾಡುತ್ತಿದ್ದರು.

ಒಂದು ದಿನ ಮಾವ ಎಂದಿನಂತೆ ಮುಸ್ಸಂಜೆಯಲ್ಲಿ ಜಗುಲಿಯ ಮೇಲೆ ಕೂತು ತಮ್ಮ ಕುಮಾರವ್ಯಾಸ ಭಾರತ ಕಾವ್ಯಪಠಣ ಮಾಡುತ್ತಿದ್ದರು. ಊರಿನ ಹತ್ತಾರು ಜನ ಅವರ ಬಳಿ ಬಂದು ಕುಳಿತಿದ್ದರು. ಆಗ ಸಿದ್ದೇಗೌಡರು ಮತ್ತು ಅವರ ಪತ್ನಿ ಚೆನ್ನಮ್ಮ ಮಾವನ ಬಳಿ ಏನನ್ನೋ ಮಾತನಾಡಲು ನಿರ್ಧರಿಸಿಕೊಂಡು ಬಂದವರಂತೆ ಬಂದು ಅವರೂ ಅಲ್ಲೇ ಕುಳಿತರು. ಸಿದ್ದೇಗೌಡರ ಹೆಂಡತಿ ಮಾವನ ಕಾವ್ಯಪಠಣಕ್ಕೆ ಎಂದೂ ಬಂದಿದ್ದಿಲ್ಲ! ಅವರು ಅಕ್ಕನ ಸಾವಿನ ಸಂದರ್ಭದಲ್ಲಿ ನಮ್ಮ ಮನೆಗೆ ಬಂದು ನಿಂತು ತಿಥಿಯ ತಿಂಡಿ ತಿನಿಸು ಪದಾರ್ಥಗಳನ್ನೆಲ್ಲಾ ಅವರೇ ಮಾಡಿಕೊಟ್ಟು ಹೋಗಿದ್ದರು. ಅಕ್ಕನಿಗೂ ಅವರಿಗೂ ಕೂಡ ಒಳ್ಳೆ ಸ್ನೇಹವಿತ್ತು. ನಾನು ನೋಡಿದ ಹಾಗೆ ಅವರಿಬ್ಬರೂ ತುಂಬಾ ಅನ್ಯೋನ್ಯವಾಗಿದ್ದರು. ವಾರಕ್ಕೊಮ್ಮೆಯಾದರೂ ಒಬ್ಬರ ಮುಖ ಒಬ್ಬರು ನೋಡದೆ, ಕಷ್ಟ ಸುಖ ಮಾತನಾಡದೆ ಅವರು ಇರುತ್ತಿರಲಿಲ್ಲ. ಅಕ್ಕನೂ ಅವರ ಮನೆಗೆ ಹೋಗುತ್ತಿದ್ದರು. ಚೆನ್ನಮ್ಮನೂ ನಮ್ಮ ಮನೆಗೆ ಬಂದು ಅದು ಇದು ಮಾತನಾಡಿ ಹೋಗುತ್ತಿದ್ದರು. ಆದರೆ, ನಾನು ಚೆನ್ನಮ್ಮ ಮತ್ತು ಸಿದ್ದೇಗೌಡರು ಒಟ್ಟಾಗಿ ಬಂದಿರುವುದನ್ನು ಕಂಡಿದ್ದು ಇವತ್ತೇ ಮೊದಲು. ಇಬ್ಬರೂ ಯಾಕೆ ಬಂದಿರಬಹುದು ಎಂಬ ಅನುಮಾನ ನನ್ನ ಮನಸ್ಸಿನಲ್ಲಿ ಕ್ಷಣ ಸುಳಿದುಹೋಯಿತು.

ಮಾವನ ಕುಮಾರವ್ಯಾಸ ಭಾರತ ಪಠಣ ಮುಗಿದಿತ್ತು. ಇವತ್ತು ಮಾವ ಭಾರತದ ಕುರುಕ್ಷೇತ್ರದ ರಣರಂಗದಲ್ಲಿ ಕೌರವರೆಲ್ಲಾ ಮಡಿದು ಹೆಣವಾಗಿ ಬಿದ್ದಿರುವ ಸನ್ನಿವೇಶದಲ್ಲಿ ಕೌರವ, ಪಾಂಡವರ ಮಹಿಳೆಯರು ಬಂದು ತಂತಮ್ಮ ಗಂಡಂದಿರ ಹೆಣಗಳನ್ನು ಯುದ್ಧಭೂಮಿಯಲ್ಲಿ ಹುಡುಕುತ್ತಿರುವ ಸನ್ನಿವೇಶವನ್ನು ಕಣ್ಣಿಗೆ ಕಟ್ಟುವಂತೆ ಹೇಳಿ ಮುಗಿಸಿದ್ದರು. ರಣರಂಗದಲ್ಲಿ ಕುಂತಿಯೂ ತನ್ನ ಹಿರಿಮಗ ಕರ್ಣನ ಶವವನ್ನು ಹುಡುಕಿ ಎರಡೂ ಕೈಗಳಿಂದ ಎತ್ತಿಕೊಂಡು ಬಂದು ಶವಸಂಸ್ಕಾರ ಮಾಡಲು ಧರ್ಮರಾಯನಿಗೆ, ಧೃತರಾಷ್ಟ್ರ, ಗಾಂಧಾರಿಗೆ ಹೇಳುವ ಚಿತ್ರ ನನ್ನ ಕಣ್ಣಿನ ಮುಂದೆಯೂ ಬಂದಂತಾಗಿತ್ತು. ಆಮೇಲೆ ಮಾವ ಸಿದ್ದೇಗೌಡ ಮತ್ತು ಚೆನ್ನಮ್ಮರನ್ನು ಒಳಗೆ ನಡುಮನೆಗೆ ಕರೆದು ಕೂರಿಸಿ ಅವರ ಯೋಗಕ್ಷೇಮ ವಿಚಾರಿಸಿದರು. ಸಿದ್ದೇಗೌಡರು, 'ನಮ್ಮ ಆರೋಗ್ಯ ಹಾಗಿರಲಿ, ನೀವು ಹೇಗಿದ್ದೀರಿ? ನಿಮ್ಮ ನೋವುಗಳೆಲ್ಲಾ ನಮಗೆ ಅರ್ಥವಾಗುತ್ತವೆ. ಅವುಗಳನ್ನೆಲ್ಲಾ ಮರೆಯುವುದಕ್ಕೆ ತಾವು ಈ ರೀತಿಯ ಕಾವ್ಯ ಪಠಣ ಮಾಡುವುದನ್ನು ಅಭ್ಯಾಸವಾಗಿಟ್ಟುಕೊಂಡಿದ್ದು ಬಹಳ ಒಳ್ಳೆಯದೇ ಆಯ್ತು. ಅಷ್ಟೇ ಅಲ್ಲ, ಅದರಿಂದ ನಮ್ಮ ಜನಗಳಿಗೂ ಸಂತೋಷ, ನೀತಿ ಸಿಗುತ್ತದೆ. ಇದಕ್ಕೆ ನಾವು ನಿಮಗೆ ಎಷ್ಟು ಚಿರಋಣಿಯಾಗಿದ್ದರೂ ಸಾಲದು' ಎಂದೆಲ್ಲಾ ಮಾವನನ್ನು ಪ್ರಶಂಸಿಸಿ ವಿಷಯಕ್ಕೆ ಬಂದರು.

ಸಿದ್ದೇಗೌಡರು ಮಾವನಿಗೆ 'ನಿಮ್ಮ ಮುಂದೆ ಯಾಕೆ ಮುಚ್ಚುಮರೆ ಮಾಡಲಿ, ನಾನು, ನನ್ನ ಹೆಂಡತಿ, ನನ್ನ